ಮರಳಿ ಗೂಡು ಸೇರಿಯಾಗಿರುತ್ತಿತ್ತು. ಹೊಳೆಯ ಬದಿಯಲ್ಲಿ ಕಾಲಹರಣ ಮಾಡುತ್ತಾ ಅವನು ಸೂಕ್ತ ಸಮಯಕ್ಕೆ ಹೊಂಚು ಹಾಕುತ್ತಿದ್ದ. ಈ ಸಮಯ ಗಂಟೆಗಟ್ಟಲೆ ಎಳೆದರೂ ಆಶ್ಚರ್ಯವಿರುತ್ತಿರಲಿಲ್ಲ. ಸುಲೋಚನಾಳಿಂದ ಹಸಿರು ನಿಶಾನೆ ದೊರಕುತ್ತಿದ್ದಂತೆ ಈ ಕಾಯುವಿಕೆಗೆ ಮುಗಿತಾಯ. ಸುಲೋಚನಾಳ ಮನೆಯ ಕಕ್ಕಸು ಇದ್ದುದು ಮನೆಯ ಒಂದು ಪಕ್ಕದಲ್ಲಿ. ಗೇಟು ಗೀಟು ಏನಿಲ್ಲದ ಮನೆಗಳು. ಮನೆಯೆದುರಿನಿಂದ, ಹಿಂಬದಿಯಿಂದ ಸಲೀಸಾಗಿ ಹಾಯ್ದು ಕಕ್ಕಸುಮನೆ ತಲುಪುವ ವ್ಯವಸ್ಥೆ. ಅಲ್ಲಿ ನಡೆಯುತ್ತಿತ್ತು ಪ್ರೇಮಿಗಳ ಬೇಟ, ಕೂಟ. ಮೊದಲ ಬಾರಿ ಈ ಕಳ್ಳ ವ್ಯವಹಾರವನ್ನು ಕಂಡಾಗ ಭಾಮಾನಿಗೆ ದಿಗಿಲಿನೊಂದಿಗೆ ಒಂದಲ್ಪ ರೋಮಾಂಚನ. ಒಂದಲ್ಪ ಕುತೂಹಲ. ಪ್ರಕೃತಿಯ ಕರೆ ತೀರಿಸಿಕೊಳ್ಳಲು ಅವನು ಅಲ್ಲಿ ನುಸುಳಿದ್ದಾನೆಂದು ಮೊದಲಿಗೆ ಭಾವಿಸಿದ್ದರೂ ಹೊಳೆ ದಂಡೆಯಲ್ಲಿದ್ದವನಿಗೆ ಈ ಕಣ್ಣುಮುಚ್ಚಾಲೆಯ ಆವಶ್ಯಕತೆಯೇಕೆ ಎನ್ನುವ ಪ್ರಶ್ನೆ ಕಾಡಿತ್ತು ಅಮಾಯಕ ಹುಡುಗಿಗೆ. ನೋಡನೋಡುತ್ತಿದ್ದಂತೆ ಮನೆಯೊಳಗಿನಿಂದ ಬಂದ ಸುಲೋಚನಾ ಕಕ್ಕಸುಮನೆಯೊಳಗೆ ಸೇರಿಕೊಂಡು ಬಾಗಿಲು ಹಾಕಿಕೊಂಡಿದ್ದಳು. ಒಡೆದು ಹೋಗುವಂತೆ ಹೊಡೆದುಕೊಳ್ಳುತ್ತಿತ್ತು ಭಾಮಾನ ಎದೆ, ಆ ಮೊದಲ ಸಲದ ದೃಶ್ಯಕ್ಕೆ ಸಾಕ್ಷಿಯಾದಾಗ. ಆಮೇಲಿಂದ ಆ ಕಡೆ ಕಣ್ಣಿಡುವುದೇ ಒಂದು ಉದ್ಯೋಗ ಆಗಿ, ಸುಲೋಚನಾ ಯಾವತ್ತಾದರೂ ಸ್ಕೂಲಿಗೆ ಚಕ್ಕರ್ ಹಾಕಿದರೆ ಅವಳೇನು ನಡೆಸಿದ್ದಾಳೆಂಬುದು ಕಣ್ಣೆದುರು ಕುಣಿಯತೊಡಗಿ, ಯಾರೊಂದಿಗಾದರೂ ಹೇಳುವುದೋ, ಬಿಟ್ಟುಬಿಡುವುದೋ? ಮನೆಯವರೊಂದಿಗೆ ಸಲೀಸಾಗಿ ಹೇಳಬಹುದಿತ್ತು. ಆದರೆ ಹೇಳಿರಲಿಲ್ಲ ಭಾಮಾ. ಯಾಕೆಂದು ನಿಖರ ಕಾರಣ ಅವಳಿಗೇ ಗೊತ್ತಿರಲಿಲ್ಲ. ಕೆಲವೊಮ್ಮೆ ತಪ್ಪು ಮಾಡುವವರಿಗಿಂತಲೂ ನೋಡುವವರಿಗೇ ಮುಜುಗರವಾಗುವ ಹೆಸರರಿಯದ ಭಾವನೆ? 'ರಾಜನ ಕಿವಿ, ಕತ್ತೆ ಕಿವಿ' ಎನ್ನುವ ಗುಟ್ಟನ್ನು ಎಷ್ಟು ಕಾಲ ಹೊಟ್ಟೆಯೊಳಗೆ ಬಚ್ಚಿಟ್ಟುಕೊಳ್ಳಲು ಸಾಧ್ಯ? 'ಯಾರಿಗೂ ಹೇಳ್ಬಾರ್ದು ಕಣೇ..' ಎನ್ನುತ್ತಾ ಅಂಗೈಯೊಡ್ಡಿ ದೇವರಾಣೆ ಹಾಕಿಸಿಕೊಂಡು ಕೆಲ ಅತ್ಯಾಪ್ತ ಗೆಳತಿಯರೆದುರು ಗುಟ್ಟು ಒಡೆದಿದ್ದಳು ಭಾಮಾ. 'ಹೌದೇನೇ? ಸತ್ಯ?' ಎನ್ನುತ್ತಾ ಅವರೆಲ್ಲಾ ದಂಗು ಬಡಿದಾಗ ಯಾಕೆ ಹೆದರಿಕೆಯಾಗಿದ್ದೋ? ಆಣೆ ಮುರಿದು 'ಇವಳು ಹೇಳಿದ್ದು...' ಎಂದು ಯಾರಾದರೂ ಇವಳೆಡೆಗೆ ಬೆಟ್ಟು ಮಾಡಿದರೆ ಸಾಕ್ಷ್ಯ ತಂದು ತೋರಿಸಬಲ್ಲೆನೇ ತಾನು? ಅಪ್ಪನಿಗೇನಾದರೂ ಗೊತ್ತಾದರೆ 'ಕಂಡೋರ ಮನೆ ಸಮಾಚಾರ ನಿಂಗ್ಯಾಕೆ ಬೇಕಿತ್ತು? ತಿಂದಿದ್ದು ಕಣ್ಣಿಗೆ ಬಂದಿದ್ಯಾ?' ಎನ್ನುತ್ತಾ ಹಲ್ಲುದುರಿಸುತ್ತಾನೆಂದೇ ಲೆಕ್ಕ. 'ಹೀಗೆ ನಡೆದೇಹೋಯ್ತು' ಎನ್ನುವ ಕನವರಿಕೆ ಅದೆಷ್ಟು ದಿನ ಕನಸಾಗಿ ಕಾಡಿ ನಿದ್ದೆ ಕಸಿದುಕೊಂಡಿತ್ತೋ? 'ಸಾಯ್ಲಿ ಅವಳು...' ಎಂದು ಶಾಪ ಹಾಕಿಸಿತ್ತೋ? ದೇವರ ದಯದಿಂದ ಕನಸು ನಿಜವಾಗಲಿಲ್ಲ. ನಂಬಿದ ಗೆಳತಿಯರು ಬಿಟ್ಟು ಕೊಡಲಿಲ್ಲ. ಹೀಗಿರುವಾಗ, ಎಸ್ಸೆಸ್ಸೆಲ್ಸಿ ಪರೀಕ್ಷೆ ಮುಗಿಯುವ ಮುನ್ನವೇ ಸುಲೋಚನಾಳ ಮದುವೆ ಅರ್ಜೆಂಟರ್ಜೆಂಟಾಗಿ ನಡೆದು ಹೋಯ್ತು. ದೂರದ ಮಂಗಳೂರಿನ ವರ. 'ಅದೇನೋ ಕಾಂಟ್ರಾಕ್ಟ್ ಕೆಲಸ ಅಂತಪ್ಪಾ, ಮನೆ ಕಟ್ಟಸೋದು...' ಎನ್ನುವ ಗುಸುಗುಸು. ಮದುವೆಗೆ ಎಲ್ಲರಿಗೂ ಕರೆ ಬಂದಿರಲಿಲ್ಲ ಮತ್ತು ಮದುವೆಗೆ ಹೋಗಿ ಬಂದವರು ಹೇಳಿದ ಪ್ರಕಾರ ಸುಲೋಚನಾಳ ಗಂಡ ವಯಸ್ಸಲ್ಲಿ ಅವಳಿಗಿಂತಾ ತುಂಬಾ ದೊಡ್ಡವನ ಥರ ಕಾಣಿಸುತ್ತಿದ್ದನಂತೆ. 'ಒಳ್ಳೇ ಕೆಲಸ ಮಾಡಿದ್ರು. ಇಲ್ದಿದ್ರೆ ಒಂದು ಹೋಗಿ ಒಂಭತ್ತಾಗ್ತಿತ್ತು' ಎನ್ನುವ ಮಾತು ತಮ್ಮ ಮನೆಯಲ್ಲೂ ಕೇಳಿ ಬಂದಾಗ ಭಾಮಾನಿಗೆ ಅರಿವಾಗಿತ್ತು, 'ಇದು ಬೆಕ್ಕು ಕಣ್ಣು ಮುಚ್ಚಿಕೊಂಡು ಹಾಲು ಕುಡಿದ ಕಥೆ' ಎಂದು. ಆ ಮನೆಯವರು ಮನೆ ಖಾಲಿ ಮಾಡಿಕೊಂಡು ಮತ್ತೆಲ್ಲಿಗೋ ಹೊರಟು ಹೋಗಿದ್ದರು ಮತ್ತು ಭಾಮಾನ ಮನಸ್ಸಿನಿಂದ ಕ್ರಮೇಣ ಸುಲೋಚನಾ ಮರೆಯಾಗಿ ಹೋಗಿದ್ದಳು.

* * *

